

ರಾಜಾ ರಾಧಾ ರೆಡ್ಡಿ ಕುಟುಂಬ

ಪ್ರಾಥಮಿಕ ಪಾಠಗಳನ್ನು ಕಲಿತಿದ್ದರು. ಅವರಿಗೆ ಅನಾಯಾಸವಾಗಿ ನೃತ್ಯವು ಒಲಿದು ಬಂದದ್ದೂ ಒಂದು ಅದೃಷ್ಟವೇ ಸರಿ. ಯಶಸ್ಸಿನ ವಿಚಾರಕ್ಕೆ ಬಂದಾಗ, ಮಕ್ಕಳು ಬಹಳ ಹಟಮಾರಿಗಳು. ತಮ್ಮದೇ ಆದ ಸ್ವಂತ ರೀತಿಯಲ್ಲಿ ನಾವು ಬದುಕು ಕಟ್ಟಿಕೊಳ್ಳಬೇಕು ಎಂದು ಜಿದ್ದಿಗೆ ಬಿದ್ದವರು. ಯಾಮಿನಿ ರೆಡ್ಡಿ ಹೊಸ ರೀತಿಯ ಪರಿಕಲ್ಪನೆಗಳನ್ನು ರೂಪಿಸುವಲ್ಲಿ, ಕೂಚಿಪುಡಿಯನ್ನು ಹೊಸತಲೆಮಾರಿಗೆ ದಾಟಿಸುವಲ್ಲಿ ತುಂಬ ಮುತುವರ್ಜಿಯಿಂದ ಕೆಲಸ ಮಾಡುತ್ತಾಳೆ. ಭಾವನಾ ರೆಡ್ಡಿ ಸಂಗೀತದತ್ತ ಒಲವು ಬೆಳೆಸಿಕೊಂಡಳು. ಹಾಗಾಗಿ ಅವಳು ವಿದೇಶದಲ್ಲಿ ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿಕೊಂಡಿದ್ದಾಳೆ. ಅವರಿಬ್ಬರು ಯಶಸ್ಸಿಗಾಗಿ ಹೆಚ್ಚು ಪ್ರಯಾಸಪಟ್ಟರೆ, ಅದರಿಂದ ಅವರ ವ್ಯಕ್ತಿತ್ವಕ್ಕೆ ಮತ್ತಷ್ಟು ಮೆರುಗು ಬರುತ್ತದೆ ಅಲ್ಲವೇ.

- **ಕೂಚಿಪುಡಿ ಊರಿನಲ್ಲಿ ನಡೆಯುತ್ತಿದ್ದ ಭಾಗವತ ಮೇಳ, ನೃತ್ಯಗಳಿಗೆ ಹೋಲಿಸಿದರೆ ಇಂದಿನ ಪ್ರಸ್ತುತಿಗಳು ಬಹಳ ವೈಭವಯುತವಾಗಿರುತ್ತವೆ. ತಂತ್ರಜ್ಞಾನ, ಬೆಳಕು, ಬಣ್ಣಗಳು ಗಾಢವಾಗಿರುತ್ತವೆ. ತಂತ್ರಜ್ಞಾನದ ಅಬ್ಬರದಲ್ಲಿ ನೃತ್ಯವು ಗೌಣವಾಗುತ್ತಿದೆ ಎಂದು ನಿಮಗೆ ಅನಿಸಿದ್ದಿದೆಯೇ?**

ಸುಮಾರು 50 ವರ್ಷಗಳಿಂದ ನಾನು ಮತ್ತು ರಾಧಾ ನರ್ತಿಸುತ್ತ ಬಂದಿದ್ದೇವೆ. ಈಗಲೂ ನಾನು ವೇದಿಕೆಯ ಮೇಲೆ ಚಿಕ್ಕದೊಂದು ಪ್ರಸ್ತುತಿಯನ್ನು ಮಾಡುವುದುಂಟು. ನಾನು ಬಾಲ್ಯದಲ್ಲಿ ನೋಡಿದ ಭಾಗವತ ಮೇಳಕ್ಕೂ, ನೃತ್ಯೋತ್ಸವಗಳಲ್ಲಿ – ಅಂತರರಾಷ್ಟ್ರೀಯ ಉತ್ಸವಗಳಲ್ಲಿ ನಾವು ನೀಡುವ ಪ್ರದರ್ಶನಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಈ ಮಹಾನ್ ಬದಲಾವಣೆಗೆ ತಂತ್ರಜ್ಞಾನದ ನೆರವು ಲಭ್ಯವಾಗಿದ್ದೇ ಕಾರಣ ಎಂಬುದರಲ್ಲಿ ಎರಡು ಮಾತಿಲ್ಲ. ಯಾವುದನ್ನೇ ಆಗಲಿ, ಇತಿಮಿತಿಯಲ್ಲಿ ಬಳಸಿದರೆ ಅವುಗಳಿಂದ ಪ್ರಯೋಜನ ಸಿಗುತ್ತದೆ. ಅವುಗಳ ದಾಸರಾದರೆ ನಾವು ಅಳಿದುಹೋಗುತ್ತೇವೆ. ಇದೊಂದು ಸರಳ ವಿಚಾರವಲ್ಲವೇ. ಕೊರೊನಾ ಕಾಲದಲ್ಲಿ ಲಾಕ್‌ಡೌನ್ ಹೇರಿದಾಗ ಇಡೀ ಕಲಾಕ್ಷೇತ್ರವೇ